**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ**
**ಘನ ನ್ಯಾಯಾಲಯದಲ್ಲಿ**

**ಪ್ರಕರಣ ಸಂಖ್ಯೆಃ ಸ್ಪೆಷಲ್ ಕೇಸ್ 6/2014**

**ದಿನಾಂಕಃ 07.08.2025**
**(ಸಾಕ್ಷಿಗೆ ಪ್ರಮಾಣ ಮಾಡಿಸಲಾಯಿತು.)**

**ಪ್ರಾ.ಸಾಃ 4 (ಚಾ.ಸಾ. 6)**

| | | |
|---|---|---|
| **ಹೆಸರು** | ಃ | **ರಾಮಚಂದ್ರ** |
| **ತಂದೆಯ ಹೆಸರು** | ಃ | **ಲೇಟ್ ಗೋಪಾಲ ರಾವ್** |
| **ವಯಸ್ಸು** | ಃ | **61 ವರ್ಷ** |
| **ಉದ್ಯೋಗ** | ಃ | **ಕೂಲಿ ಕೆಲಸ** |
| **ವಾಸ ಸ್ಥಳ** | ಃ | **ಚನ್ನಪಟ್ಟಣ** |

**ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಅಭಿಯೋಜಕರಿಂದಃ**

2012ರಲ್ಲಿ ನಾನು ಚನ್ನಪಟ್ಟಣದ ಕಾಳಮ್ಮನ ಗುಡಿ ರಸ್ತೆಯಲ್ಲಿರುವ ಗೊಂಬೆಯ ಫ್ಯಾಕ್ಟರಿಯಲ್ಲಿ ಬಣ್ಣ ಹಚ್ಚುವ ಕೆಲಸವನ್ನು ಮಾಡುತ್ತಿದ್ದೆನು. ನನಗೆ ನ್ಯಾಯಾಲಯದ ಮುಂದಿರುವ 2ನೇ ಆರೋಪಿಯ ಪರಿಚಯವಿದೆ. ಅವರು ಪಂಪ್ ಸೆಟ್ ಮೋಟರ್ ಅಂಗಡಿ ಇಟ್ಟುಕೊಂಡಿದ್ದರು. ಆ ಅಂಗಡಿ ಇರುವ ಕಟ್ಟಡವನ್ನು ನಾತೇಗೌಡ ಬಿಲ್ಡಿಂಗ್ ಎಂದು ಕರೆಯುತ್ತಾರೆ. ಆ ಅಂಗಡಿಯ ಮೇಲಗಡೆ ರೂಮುಗಳು ಇದ್ದವು. ನನಗೆ ಗ್ರಾಮ ಲೆಕ್ಕಾಧಿಕಾರಿ ಬಸವಲಿಂಗಯ್ಯನವರ ಪರಿಚಯ ಇಲ್ಲ. ಅವರು 2ನೇ ಆರೋಪಿಯ ಅಂಗಡಿಗೆ ಬಂದು ಹೋಗಿ ಮಾಡುತ್ತಿದ್ದದ್ದನ್ನು ನಾನು ನೋಡಿದ್ದೇನೆ.

2. 2ನೇ ಆರೋಪಿ ಬಸವಲಿಂಗಯ್ಯ ನವರ ಪರವಾಗಿ ಹಣ ಪಡೆದ ಬಗ್ಗೆ ಮತ್ತು ಲೋಕಾಯುಕ್ತ ಪೊಲೀಸರು 2ನೇ ಆರೋಪಿಯ ಅಂಗಡಿಗೆ ಬಂದಿದ್ದ ವಿಷಯ ನನಗೆ ಗೊತ್ತಿಲ್ಲ. ಲೋಕಾಯುಕ್ತ ಪೊಲೀಸರು ನನ್ನನ್ನು ವಿಚಾರಣೆ ಮಾಡಿ ಹೇಳಿಕೆ ತೆಗೆದುಕೊಂಡಿಲ್ಲ.

**(ಈ ಹಂತದಲ್ಲಿ ಸದರಿ ಸಾಕ್ಷಿಯು ಅಭಿಯೋಜನ ಪಕ್ಷದ ಪ್ರಕರಣಕ್ಕೆ ಅನುಗುಣವಾಗಿ ಸಾಕ್ಷ್ಯ ನುಡಿಯುತ್ತಿಲ್ಲವಾದ ಕಾರಣ ಆತನನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದರ ಮೇರೆಗೆ ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಅಭಿಯೋಜಕರ ಪಾಟೀ ಸವಾಲಿಗೆ ಅನುಮತಿ ನೀಡಲಾಗಿದೆ.)**

**ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ**

3. ದಿನಾಂಕ:22.11.2012ರಂದು ಸಂಜೆ 6.15 ಗಂಟೆ ಸಮಯದಲ್ಲಿ ಬಸವಲಿಂಗಯ್ಯನವರು 2ನೇ ಆರೋಪಿಯ ಎಲೆಕ್ಟ್ರಿಕಲ್ ರಿವೈಂಡಿಂಗ್ ವರ್ಕ್ಸ್ ಅಂಗಡಿಗೆ ಬಂದಿದ್ದರು ಎನ್ನುವುದು ನನಗೆ ಗೊತ್ತಿಲ್ಲ. ಸ್ವಲ್ಪ ಸಮಯದ ನಂತರ 2ನೇ ಆರೋಪಿಯ ಅಂಗಡಿಗೆ ಲೋಕಾಯುಕ್ತ ಅಧಿಕಾರಿಗಳು ಬಂದಿದ್ದಾರೆಂದು ನನಗೆ ತಿಳಿಯಿತು ಅಂದರೆ ಸರಿಯಲ್ಲ. ನಂತರ ರಾಮದಾಸ್ ಎಂಬುವರು ಕೋಮನಹಳ್ಳಿ ಗ್ರಾಮದಲ್ಲಿ ಮಾಡಿಸಿರುವ ಕಾಮಗಾರಿ ಕೆಲಸಕ್ಕೆ ಸಂಬಂಧಪಟ್ಟಂತೆ ಬಸವಲಿಂಗಯ್ಯ ರವರು ರಾಮದಾಸ್ ರವರಿಂದ ರೂ.10 ಸಾವಿರ ಲಂಚದ ಹಣಕ್ಕೆ ಒತ್ತಾಯ ಮಾಡಿರುತ್ತಾರೆಂದು ಲೋಕಾಯುಕ್ತ ಠಾಣೆಯಲ್ಲಿ ಕೇಸು ದಾಖಲಾಗಿರುತ್ತದೆಂದು ಹಾಗೂ ಬಸವಲಿಂಗಯ್ಯನವರ ಸೂಚನೆಯ ಮೇರೆಗೆ 2ನೇ ಆರೋಪಿ ರೂ.10 ಸಾವಿರಗಳ ಲಂಚದ ಹಣವನ್ನು ರಾಮದಾಸ್ ರವರಿಂದ ಕೇಳಿ ಪಡೆದುಕೊಂಡಿರುತ್ತಾರೆಂದು ನನಗೆ ತಿಳಿಯಿತು ಅಂದರೆ ಸರಿಯಲ್ಲ. ಈ ಎಲ್ಲಾ ವಿಷಯಗಳನ್ನು ಹೇಳಿ ನಾನು ಲೋಕಾಯುಕ್ತ ಪೊಲೀಸರ ಮುಂದೆ ಹೇಳಿಕೆಯನ್ನು ಕೊಟ್ಟಿದ್ದೇನೆಂದರೆ ಸರಿಯಲ್ಲ. 2ನೇ ಆರೋಪಿ ನನಗೆ ಪರಿಚಯವಿರುವುದರಿಂದ ಅವರಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಸಾಕ್ಷಿ ಹೇಳಿಕೆಯನ್ನು **ನಿಪಿ 44** ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ

(2ನೇ ಆರೋಪಿಯ ಪರ ವಕೀಲರು ಗೈರು ಹಾಜರಿರುತ್ತಾರೆ. 2ನೇ ಆರೋಪಿಯು ಅವರ ವಕೀಲರು ಬಂದಿಲ್ಲವೆಂದು ಹೇಳಿದ್ದರಿಂದ ಪಾಟೀ ಸವಾಲನ್ನು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.

(ಬಿ.ವಿ.ರೇಣುಕ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ.